Reg. No.

**BASKAL/BSWKAL 253**

**ಗುಣಾಂಕ ಆಧಾರಿತ ನಾಲ್ಕನೆಯ ಸೆಮಿಸ್ಟರ್ ಬಿ.ಎ./ಬಿ.ಎಸ್.ಡಬ್ಲ್ಯೂ. ಪದವಿ ಪರೀಕ್ಷೆ, ಮೇ/ಜೂನ್ 2016**
**ಕನ್ನಡ ಭಾಷಾ ಪತ್ರಿಕೆ – IV**
**( 2014 – 15 ಬ್ಯಾಚು ಮತ್ತು ಮುಂದಿನವರಿಗಾಗಿ)**

ಸಮಯ : 3 ಗಂಟೆಗಳು                                                  ಗರಿಷ್ಠಾಂಕಗಳು : 80

## ಭಾಗ–1

## (ಕಾವ್ಯ)

I. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8 = 8)**

1) ಅಣ್ಣನಾಜ್ಞೆಯನ್ನು ಮೀರಲಾರದ ಲಕ್ಷ್ಮಣನು ಧರ್ಮಸಂಕಟಕ್ಕೆ ಸಿಲುಕಿದ ಪರಿಯನ್ನು ಲಕ್ಷ್ಮೀಶನ ಕಾವ್ಯ ಭಾಗದ ಹಿನ್ನೆಲೆಯಲ್ಲಿ ವಿವರಿಸಿರಿ.

2) ತಾಯಿ ಮತ್ತು ಮಗಳ ಬದುಕು 'ಅಮ್ಮ' ಕವನದಲ್ಲಿ ಮುಖಾಮುಖಿಗೊಂಡಿರುವ ಕ್ರಮವನ್ನು ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×6 = 6)**

1) ಕಾಮನು ಮನಸಿಜನಾದ ಸನ್ನಿವೇಶವನ್ನು ವಿವರಿಸಿರಿ.

2) ಮಾನವ ಜನ್ಮವನ್ನು ಹಾಳು ಮಾಡಿಕೊಳ್ಳದಂತೆ ಪುರಂದರದಾಸರು ಹೇಗೆ ಎಚ್ಚರಿಕೆ ನೀಡಿದ್ದಾರೆ ?

ಇ) **ಒಂದಕ್ಕೆ** ಟಿಪ್ಪಣಿ ಬರೆಯಿರಿ. **(1×4 = 4)**

1) ಶ್ರೀಪಾದರಾಯರು

2) ದಿನಕರ ದೇಸಾಯಿ.

II. ಅ) **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ ಭಾವ ಸ್ವಾರಸ್ಯವನ್ನು ವಿವರಿಸಿರಿ. **(1×5=5)**

1) ಪಾಪ ಕ್ಷಯಕೆಂದು ಗಂಗೆಯೊಳ್ಮಿಂದರೆ
ಪಾಪಿಯ ಮೊಸಳೆ ತಿಂದಂತೆ
ತಾಪಸ್ಥ ಸುರರಿಂಗೆ ಹಿತಗೈಯ ಬಂದ ಪ್ರಾ
ಣೋಪನನುರುಹಿದೆ ನೀನು.

P.T.O.

2) ಈಗ ಕೊನೆಗಾಲದಲ್ಲಿ ನನ್ನಮ್ಮ ನಡೆದಾಡುವ ಸ್ಮಾರಕ
ಅಪ್ಪ ಅಣ್ಣ ಅಕ್ಕ ತಮ್ಮಂದಿರ ಉಳಿ ಕೆತ್ತನೆಯ
ಒಂದೊಂದು ಏಟಿಗೆ ಒಮ್ಮೆ ರೂಪುಗೊಂಡ
ಜಳಕದಲ್ಲಿ ತೊಯ್ದ ಶಿಲ್ಪ.

ಆ) **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿರಿ.

1) ನೀನು ಬೆಂದು ಹೋದಪೆ ಬೇಡ ಮಗನೆ.

2) ಹೀನ ಜನರೊಳಗಾಟ ಶ್ವಾನಾದಿಗಳ ಕೂಟ.

3) ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ.

ಇ) **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ.

1) ಲಕ್ಷ್ಮೀಶನ ಕಾವ್ಯದ ಹೆಸರೇನು ?

2) ಶ್ರೀಪಾದರಾಯರ ಪೂರ್ವಾಶ್ರಮದ ಹೆಸರೇನು ?

3) 'ಅನುದಿನದ ಅಂತರ ಗಂಗೆ' – ಇದು ಯಾರ ಆತ್ಮ ಕಥನ ?

4) ಕನಕದಾಸರ ಊರು ಯಾವುದು ?

## ಭಾಗ – 2

## (ಮಹಾಕಾವ್ಯ)

III. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ.

1) ರಾಮ ಪಟ್ಟಾಭಿಷೇಕದ ಸಿದ್ಧತೆಯ ವರ್ಣನೆಯು ಕಾವ್ಯಭಾಗದಲ್ಲಿ ಹೇಗೆ ಒಡಮೂಡಿದೆ ?

2) ದಶರಥನಲ್ಲಿ ಕೈಕೆಯು ಬೇಡಿಕೆಯನ್ನಿಟ್ಟ ಸಂದರ್ಭವನ್ನು ನಿರೂಪಿಸಿರಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.

1) ರಾಮ – ಸೀತೆಯ ಸರಸ ದಾಂಪತ್ಯದ ಚಿತ್ರಣ.

2) 'ಕುವೆಂಪು ಚಿತ್ರಿಸಿದ ದಶರಥನ ಪಾತ್ರ'.

ಇ) **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ.

1) ಕುವೆಂಪುರವರಿಗೆ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟ ಕೃತಿ ಯಾವುದು ?

2) ಕುವೆಂಪು ಅವರ ಆತ್ಮ ಚರಿತ್ರೆಯ ಹೆಸರೇನು ?

## ಭಾಗ – 3

## (ಗದ್ಯ)

**ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ. **(1×8=8)**

1) ವಿದ್ಯಾರ್ಥಿಗಳ ಮತ್ತು ಪ್ರಾಧ್ಯಾಪಕರ ಸಂಬಂಧದ ಗುಣಾತ್ಮಕ ವ್ಯಾಖ್ಯಾನ 'ವಿದ್ಯಾರ್ಥಿಗಳೊಡನೆ' ಪ್ರಬಂಧದಲ್ಲಿ ಹೇಗೆ ಮೂಡಿಬಂದಿದೆ ?

2) ಜಾತೀಯತೆ ಲೇಖಕ ದೇವನೂರು ಮಹಾದೇವ ಅವರನ್ನು ಕಾಡಿದ ಬಗೆ ಯಾವುದು ? ವಿವರಿಸಿರಿ.

**ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ಕೊಡಗಿನ ಚರಿತ್ರೆಯಲ್ಲಿ ಲಕ್ಕು ದಾಖಲಾದ ಬಗೆಯನ್ನು ವಿವರಿಸಿ.

2) ಮನೆಯೆಂಬ ಕಸದ ತೊಟ್ಟಿ ಪ್ರಬಂಧದ ಆಶಯವೇನು ?

**ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. **(2×1=2)**

1) 'ಮುಸ್ಸಂಜೆಯ ಕಥಾ ಪ್ರಸಂಗ' – ಇದು ಯಾರ ಕೃತಿ ?

2) 'ಕುಸುಮಬಾಲೆ' – ಇದು ಯಾರ ಶ್ರೇಷ್ಠ ಕಾದಂಬರಿ ?

## ಭಾಗ – 4

## (ಕ್ರಿಯಾತ್ಮಕ ಕನ್ನಡ)

**ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಒಂದು ಚಿತ್ರಕಥೆಯನ್ನು ರಚಿಸುವಾಗ ಇರಬೇಕಾದ ಮುಖ್ಯ ಅಂಶಗಳು ಯಾವುವು ? ವಿವರಿಸಿರಿ.

2) ಅಭ್ಯರ್ಥನ ಪತ್ರ ಎಂದರೇನು ? ಎಷ್ಟು ವಿಧ ? ವಿವರಿಸಿರಿ.

**ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ಅಭ್ಯರ್ಥನ ಪತ್ರಕ್ಕೆ ಒಂದು ಉದಾಹರಣೆ ಕೊಡಿ.

2) ಸಾಕ್ಷ್ಯ ಚಿತ್ರ ಎಂದರೇನು ? ವಿಚಾರ ಮಾಡಿ.

**ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. **(2×1=2)**

1) 'ಅಮ್ಮ ಅರಿಯಾನ್' ಮಲಯಾಳಂ ಚಿತ್ರವನ್ನು ನಿರ್ದೇಶಿಸಿದವರು ಯಾರು ?

2) ವಿಶ್ವದ ಮಹಾನ್ ದಿಗ್ದರ್ಶಕ ಸ್ಟೀವನ್ ಸ್ಪಿತ್ ಬರ್ಗ್ ನಿರ್ದೇಶಿಸಿದ ಆಸ್ಕರ್ ಪ್ರಶಸ್ತಿ ವಿಜೇತ ಚಿತ್ರ ಯಾವುದು ?

---